ಕುಷ್ಟಗಿ ಕ್ಷೇತ್ರದ ಹನುಮನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ.

386 - ಶ್ರೀ ಕೆ.ಶರಣಪ್ಪ (ಕುಷ್ಟಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಷ್ಟಗಿ ಕ್ಷೇತ್ರದ ಹನುಮನಾಳ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು ಕುಸಿದು ಬೀಳುವ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ. ದುರಸ್ತಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 1995-96ನೇ ಸಾಲಿನಲ್ಲಿ ದುರಸ್ತಿ ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅರಣ್ಯ ಇಲಾಖೆಯ ಒತ್ತುವರಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು.

388 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯ ಒತ್ತುವರಿ ಮತ್ತು ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಇದಕ್ಕೆ ಅನುಸರಿಸಬೇಕಾದ ಮಾರ್ಗ ಸೂಚಿ: ನಿಂಬಂಧನೆಗಳೇನು?

ಇ) ಒತ್ತುವರಿ: ಅಕ್ರಮ ಸಾಗುವಳಿದಾರರನ್ನು ಗುರುತಿಸುವ ಕ್ರಮವನ್ನು ಸರ್ಕಾರ ಕೈಗೊಂಡಿದೆಯೇ? ಇದ್ದರೆ ಮಾಹಿತಿಯನ್ನು ವರ್ಷವಾರು ಒದಗಿಸುವುದು.

ಈ) ಸರ್ಕಾರ ಸಕ್ರಮಕಾರ್ಯವನ್ನು ಯಾವಾಗಿನಿಂದ ಕೈಗೊಳ್ಳುತ್ತಿದೆ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಅರಣ್ಯ ಭೂಮಿಯನ್ನು ಅರಣ್ಯೇತರ ಉಪಯೋಗಕ್ಕಾಗಿ ಬಿಡುಗಡೆ ಮಾಡಬೇಕಾದರೆ ಅರಣ್ಯ (ಸಂರಕ್ಷಣೆ) ಕಾಯಿದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಬೇಕಾಗುತ್ತದೆ.

ರಾಜ್ಯಸರ್ಕಾರದಿಂದ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ದಿನಾಂಕ: 27.4.1978ರ ಮುಂದಿನ ಒತ್ತುವರಿಗಳನ್ನು ಹಾಗೂ 27.4.78ರ ಮತ್ತು 24.10.1980ರ ಮಧ್ಯೆ ನಡೆದ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಲು ಮಾತ್ರ ಪ್ರಸ್ತಾವನೆ ಕಳುಹಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಆ) ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣಾ ಕಾಯಿದೆ 1980ರ ಪ್ರಕಾರ 25.15.1980 ಮುಂಚೆ ನಡೆದ ಒತ್ತುವರಿಗಳನ್ನು ಮಾತ್ರ ಸಕ್ರಮಗೊಳಿಸಲು ಅವಕಾಶ ಇದೆ. ಒತ್ತುವರಿಗಳನ್ನು

ಸಕ್ರಮಗೊಳಿಸುವ ಸಂದರ್ಭದಲ್ಲಿ ತುಂಡು ತುಂಡಾದ ಅತಿಕ್ರಮಗಳನ್ನು ಕ್ರೋಢಿಕರಿಸಿ ಅರಣ್ಯ ಪ್ರದೇಶದ ಗಡಿ ಹೊರಗೆ ಬರುವಂತೆ ಒಂದೇ ಕಡೆ ಸಕ್ರಮಗೊಳಿಸಲು ಕೇಂದ್ರ ಸರ್ಕಾರದ ಮಾರ್ಗದರ್ಶನ ಇರುತ್ತದೆ. 24.10.1980ರ ನಂತರದ ಯಾವುದೇ ಒತ್ತುವರಿ ಸಕ್ರಮಗೊಳಿಸಲು ಅವಕಾಶ ಇರುವುದಿಲ್ಲ. ಅಂತಹ ಪ್ರಕರಣಗಳಲ್ಲಿ ಒತ್ತುವರಿರಯಾದ ಅರಣ್ಯ ಪ್ರದೇಶ ತೆರವುಗೊಳಿಸಬೇಕಾಗುತ್ತದೆ.

ರಾಜ್ಯ ಸರ್ಕಾರದ ಆದೇಶಗಳಂತೆ ಮೇಲ್ಕಾಣಿಸಿದ ಕೇಂದ್ರ ಸರ್ಕಾರದ ಅರಣ್ಯ (ಸಂರಕ್ಷಣೆ) ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಕೆಳಕಾಣಿಸಿದ ನಿಂಬಂಧನೆಗೊಳಪಟ್ಟು ಸಕ್ರಮಗೊಳಿಸಲು ನಿರ್ಣಯಿಸಿದೆ.

1. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಭೂರಹಿತ ಕೃಷಿ ಕಾರ್ಮಿಕರಿಂದಾದ ಒತ್ತುವರಿಗಳು ಮಾತ್ರ.
2. 3 ಎಕರೆ(1.2 ಹೆ) ರಷ್ಟು, ಒತ್ತುವರಿ ಮಾತ್ರ ಪ್ರತಿ ಪ್ರಕರಣದಲ್ಲಿ ಪರಿಗಣಿಸಲಾಗುವುದು.
3. ಅರಣ್ಯ ಭೂಮಿಯ ತಲಾ 3 ಎಕರೆ (1.2 ಹೆ.)ಗಿಂತ ಹೆಚ್ಚಿನ ಎಲ್ಲಾ ಅತಿಕ್ರಮಣ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ 1953ರ ಕಲಂ 61 ಎ ರನ್ವಯ ತೆರವುಗೊಳಿಸತಕ್ಕದ್ದು.

ಇ) ದಿನಾಂಕ: 27.1.1978ರವರೆಗೆ 21569 ಕುಟುಂಬಗಳನ್ನು ಹಾಗೂ 27.4.1978ರಿಂದ 24.10.1980 ರವರೆಗೆ 1191ಕುಟುಂಬಗಳು ಒತ್ತುವರಿ ಮಾಡಿರುವುದನ್ನು ಗುರ್ತಿಸಲಾಗಿದೆ.

ಈ) ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದ ನಂತರ ಸಕ್ರಮಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು.

ವಯೋಮಿತಿ ಆಧರಿಸಿ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ

389 - ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲಾ ಶಿಕ್ಷಕರ ವಯೋಮಿತಿ ಆಧಾರದಂತೆ ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಇರುವ ತೊಂದರೆ ಏನು.

ಆ) ಪದವಿ ಪಡೆದ ಶಾಲಾ ಶಿಕ್ಷಕರ ಹಿರಿತನದ (ಸೀನಿಯಾರಿಟಿ) ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಲು ಇರುವ ತೊಂದರೆಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರು) :

ಅ) ಪ್ರೌಢಶಾಲಾ ಶಿಕ್ಷಣದ ಪ್ರೌಢಮಟ್ಟದ ಶಿಕ್ಷಣವಾಗಿದೆ. ಪ್ರೌಢಮಟ್ಟದ ಶಿಕ್ಷಣದಲ್ಲಿಯ ಗುಣಮಟ್ಟ ಕಾಪಾಡಿಕೊಳ್ಳಬೇಕಾಗಿದ್ದರಿಂದ ಅರ್ಹತೆಯೊಂದೆ ಆಳತೆಗೊಲಾಗುತ್ತದೆ.ಆದ್ದರಿಂದ ವಯೋಮಿತಿ ಆಧಾರದ ಮೇರೆಗೆ ನೇಮಕಾತಿ ಮಾಡುವುದು ಸೂಕ್ತವಲ್ಲ.